ಕ್ರ ಸಂ	ಜಿಲ್ಲೆ	ಸಾವಯವ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)	ನೈಸರ್ಗಿಕ ಕೃಷಿ ಪದ್ಧತಿ ಅನುಸರಿಸುತ್ತಿರುವ ರೈತರ ಸಂಖ್ಯೆ (ಅಂದಾಜು)
22	ದಾವರಾಡ	11	–
23	ಗದಗ್	103	–
24	ಹಾವೇರಿ	16	–
25	ಬಳ್ಳಾರಿ	11	–
26	ಬೀದರ್	87	2
27	ರಾಯಚೂರು	10	–
	ಒಟ್ಟು	1995	35

135 (256) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಟ್ರ್ಯಾಕ್ಟರ್‌ಗಳಿಗೆ ನೀಡುವ ಸಬ್ಸಿಡಿ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಸಬ್ಸಿಡಿ ಪಡೆಯಲು ಜೇಷ್ಠತಾ ಪಟ್ಟಿ ಪರಿಗಣಿಸಲಾಗುವುದೇ ಹಾಗೂ ತಯಾರಿಸಲಾಗಿದೆಯೇ ಹಾಗೂ ತಯಾರಿಸಲಾಗುವುದೇ ,

ಇ) ಸಬ್ಸಿಡಿಯನ್ನು ಜೇಷ್ಠತಾ ಪಟ್ಟಿಯನುಸಾರವಾಗಿ ನೀಡಲಾಗಿದೆಯೇ , ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) ಇಲ್ಲ

ಆ) ಹೌದು, ಜೇಷ್ಠತಾ ಪಟ್ಟಿಗಳನ್ನು ತಾಲ್ಲೂಕು ಮಟ್ಟದಲ್ಲಿ ತಯಾರಿಸಲಾಗಿದೆ

ಇ) ಹೌದು

136 (434) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಯು ಹೊಂದಿರುವ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ,